# ಕಪ್ಪು ಮಣ್ಣಿನ ಹೊಳೆವ ನಕ್ಷತ್ರ

■ ಪ್ರವೀಣ ಕುಲಕರ್ಣಿ

ಇಡೀ ಜಗತ್ತು ನೊಬೆಲ್ ಪ್ರಶಸ್ತಿಗಳತ್ತ ಕಣ್ಣು ನೆಟ್ಟು ಕುಳಿತಿದ್ದಾಗ ಜರ್ಮನಿಯಿಂದ ಮಹತ್ವದ ಸುದ್ದಿಯೊಂದು ಹೊರಬಿದ್ದಿತ್ತು. ಆದರೆ, ಅಷ್ಟಾಗಿ ಗಮನಸೆಳೆಯದೇ ಹೋಯಿತು. ಅದು ಜಿಂಬಾಬ್ವೆಯ ಲೇಖಕಿ, ಚಿತ್ರ ನಿರ್ಮಾಪಕಿ ತ್ಸಿತ್ಸಿ ದಂಗರೆಂಬ್‌ಗಾ ಅವರು ಜರ್ಮನ್ ಬುಕ್ ಟ್ರೇಡ್‌ನ 'ಶಾಂತಿ ಪುರಸ್ಕಾರ'ಕ್ಕೆ ಪಾತ್ರವಾದ ಸಮಾಚಾರ. ವರ್ಣಭೇದ ನೀತಿಯ ವಿರುದ್ಧ ಬದುಕಿನುದ್ದಕ್ಕೂ ಹೋರಾಟ ನಡೆಸುತ್ತಾ ಬಂದಿರುವ ಚಳವಳಿಗಾರ್ತಿ ಆಕೆ. ಅಂತೆಯೇ ಜರ್ಮನ್ ಸಾಹಿತ್ಯ ಪುರಸ್ಕಾರ ಸ್ವೀಕರಿಸುವಾಗ ಈ ಸಾಧಕಿ ನೀಡಿದ ಸಂದೇಶ ಕೂಡ ಅವರ ಹೋರಾಟದ ಹಿನ್ನೆಲೆಯನ್ನು ನೆನಪಿಸುವಂತಿತ್ತು. 'ಜಿಂಬಾಬ್ವೆ ಸೇರಿದಂತೆ ಜಗತ್ತಿನ ಹಲವೆಡೆ ಹಿಂಸೆಗೆ ಕಾರಣವಾದ ವರ್ಣಭೇದ ನೀತಿಯನ್ನು ಸಂಪೂರ್ಣವಾಗಿ ಮಣ್ಣು ಮುಕ್ಕಿಸಲು ಎಲ್ಲ ದೇಶಗಳು ಒಂದಾಗಿ ನಿಲ್ಲಬೇಕಿದೆ' ಎಂದು ಅವರು ಕರೆ ಕೊಟ್ಟಿದ್ದರು.

ಜರ್ಮನ್ ಸಾಹಿತ್ಯ ಪುರಸ್ಕಾರ ಪಡೆದ ಮೊದಲ ಕಪ್ಪುವರ್ಣೀಯ ಮಹಿಳೆ ದಂಗರೆಂಬ್‌ಗಾ. 25 ಸಾವಿರ ಯುರೊ (ಸರಿಸುಮಾರು 21 ಲಕ್ಷ ರೂಪಾಯಿ) ನಗದು ಬಹುಮಾನವನ್ನು ಪ್ರಶಸ್ತಿ ಒಳಗೊಂಡಿದೆ. 19 ಮತ್ತು 20ನೇ ಶತಮಾನಗಳಲ್ಲಿ ವಸಾಹತುಶಾಹಿ ವ್ಯವಸ್ಥೆಯಿಂದ ಪ್ರಣೀತವಾದ ವರ್ಣಭೇದ ನೀತಿಯಿಂದ ಜಿಂಬಾಬ್ವೆ ಜನ ಹೇಗೆ ನಲುಗಿದರು ಎಂಬುದನ್ನು ಆ ದೌರ್ಜನ್ಯಕ್ಕೆ ಕಾರಣವಾದ ನೆಲದಲ್ಲೇ ನಿಂತು ಗಟ್ಟಿ ಧ್ವನಿಯಲ್ಲಿ ಹೇಳಿದವರು ದಂಗರೆಂಬ್‌ಗಾ. 'ಕಪ್ಪು ವರ್ಣೀಯರನ್ನು ಕೀಳುದೃಷ್ಟಿಯಿಂದ ಕಾಣುವ ಪರಿಪಾಟ ವಸಾಹತು ಆಡಳಿತದ ಸಂದರ್ಭದಲ್ಲಿ ಮಿತಿಮೀರಿದ್ದರಿಂದ ರಕ್ತಪಾತವನ್ನೂ ನನ್ನ ನೆಲ ಕಾಣಬೇಕಾಯಿತು' ಎಂದು ಅವರು ಹೇಳುವಾಗ ಚರಿತ್ರೆಯ ಪುಟಗಳು ಕಣ್ಮುಂದೆಯೇ ಮೆರವಣಿಗೆ ಹೊರಟ ಅನುಭವವಾಗುತ್ತದೆ.

'ನರ್ವಸ್ ಕಂಡೀಷನ್ಸ್', 'ದಿಸ್ ಮಾರ್ನಬಲ್ ಬಾಡಿ'ಯಂತಹ ಕ್ಲಾಸಿಕ್ ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ಕೊಟ್ಟ ಅನನ್ಯ ಲೇಖಕಿ ದಂಗರೆಂಬ್‌ಗಾ. ಅದರಲ್ಲೂ 'ನರ್ವಸ್ ಕಂಡೀಷನ್ಸ್' (1988) ಜಿಂಬಾಬ್ವೆಯ ಕಪ್ಪುವರ್ಣೀಯ ಮಹಿಳೆ ಬರೆದ ಮೊದಲ ಇಂಗ್ಲಿಷ್ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ ಶತಮಾನದಲ್ಲಿ ಜಗತ್ತಿನ ಸಾಹಿತ್ಯದ ವ್ಯಾಖ್ಯಾನವನ್ನು ಬದಲಿಸಿದ ಕೃತಿಗಳಲ್ಲಿ 'ನರ್ವಸ್ ಕಂಡೀಷನ್ಸ್' ಕೂಡ ಒಂದು ಎಂದು ಬಿಬಿಸಿ ಹೆಸರಿಸಿದೆ. ಧ್ವನಿ ಕಳೆದುಕೊಂಡ ಜಿಂಬಾಬ್ವೆಯ ಮಹಿಳಾ ಸಮುದಾಯದ ಕೊರಳಾದ ಈ ಲೇಖಕಿ, ಮಹಿಳೆಯರಿಗೂ ಸ್ವಾತಂತ್ರ್ಯ ಮತ್ತು ಬದುಕಿನ ಹಕ್ಕು ಬೇಕು ಎಂದು ಬಲವಾಗಿ ಪ್ರತಿಪಾದಿಸಿದವರು. ಅದಕ್ಕಾಗಿ ಹೋರಾಡುತ್ತಲೇ ಬಂದವರು. ಸಮಕಾಲೀನ ಜಗತ್ತಿನ ಸಾಹಿತ್ಯ ವಲಯದಲ್ಲಿ ಇಡೀ ಆಫ್ರಿಕಾ ಖಂಡವನ್ನು ಸಮರ್ಥವಾಗಿ ಪ್ರತಿನಿಧಿಸಬಲ್ಲ ಈ ಸಾಧಕಿ, ಪ್ರಜಾ ಸ್ವಾತಂತ್ರ್ಯದ ಪ್ರತಿಪಾದಕಿಯೂ ಹೌದು.



ದಂಗರೆಂಬ್‌ಗಾ ಅವರ ಹಿನ್ನೆಲೆಯೂ ವಿಶಿಷ್ಟವಾಗಿದೆ. ಅವರ ತಂದೆ–ತಾಯಿ ಇಬ್ಬರೂ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದವರು. ಅವರ ತಾಯಿ ಸುಸಾನ್, ಪದವಿ ಪಡೆದ ಜಿಂಬಾಬ್ವೆಯ ಮೊದಲ ಕಪ್ಪುವರ್ಣೀಯ ಮಹಿಳೆ ಎಂಬ ಹಿರಿಮೆಗೆ ಪಾತ್ರರಾದವರು. ದಂಗರೆಂಬ್‌ಗಾ ಅವರ ತಂದೆ–ತಾಯಿ ಇಬ್ಬರಿಗೂ ಉನ್ನತ ಶಿಕ್ಷಣ ಪಡೆಯುವ ಹಂಬಲ. ಹೀಗಾಗಿ ಅವರಿಬ್ಬರೂ ಶಿಕ್ಷಣ ಪಡೆಯಲು ಮಕ್ಕಳೊಡನೆ ಇಂಗ್ಲೆಂಡ್‌ಗೆ ಹೋದರು. ಇದೇ ಕಾರಣದಿಂದ ದಂಗರೆಂಬ್‌ಗಾ ಕೆಲವು ವರ್ಷಗಳವರೆಗೆ ಬಾಲ್ಯವನ್ನು ಇಂಗ್ಲೆಂಡ್‌ನಲ್ಲಿ ಕಳೆದಿದ್ದರಿಂದ ಮಾತೃಭಾಷೆ ಶೋನಾಗಿಂತಲೂ ಇಂಗ್ಲಿಷ್ ಹೊಕ್ಕು ಬಳಕೆಯೇ ಹೆಚ್ಚಾಯಿತು. ಮುಂದೆ ಇಂಗ್ಲಿಷ್‌ನಲ್ಲಿ ಕೃತಿಗಳನ್ನು ರಚಿಸಲೂ ಅದರಿಂದ ಸಾಧ್ಯವಾಯಿತು.

ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಪದವಿ ಪಡೆದ ದಂಗರೆಂಬ್‌ಗಾ, 1980ರಲ್ಲಿ ವಾಪಸ್ ಜಿಂಬಾಬ್ವೆಗೆ ಬಂದ ಕೆಲವೇ ತಿಂಗಳುಗಳಲ್ಲಿ ಆ ದೇಶ ಸ್ವಾತಂತ್ರ್ಯ ಗಳಿಸಿತು. ಸ್ವಾತಂತ್ರ್ಯಪೂರ್ವದ ವಸಾಹತು ವ್ಯವಸ್ಥೆಯ ದಬ್ಬಾಳಿಕೆಗೂ ಸ್ವಾತಂತ್ರ್ಯಾನಂತರದ ಅರಾಜಕತೆಗೂ ಸಾಕ್ಷಿಯಾಗಿರುವ ಅವರು, ಜನರ ಧ್ವನಿಯಾಗಿ ನಿಂತವರು. ಮೊದಮೊದಲು ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ ಅವರು, ರಂಗ ತಂಡಗಳ ಜತೆಗೂ ಕೆಲಸ ಮಾಡಿದರು. ಕಪ್ಪುವರ್ಣೀಯ ಮಹಿಳೆಯರಿಗೆ ನಾಟಕದಲ್ಲಿ ಪಾತ್ರ ಮಾಡಲು ಅವಕಾಶವಿಲ್ಲ ಎಂಬ ನಿಯಮವನ್ನು ಮುರಿದು ಹಾಕಿದವರು. ಹಲವು ನಾಟಕ ಕೃತಿಗಳನ್ನೂ ರಚನೆ ಮಾಡಿದವರು. ಅವುಗಳು ರಂಗದ ಮೇಲೆ ಪ್ರಯೋಗ ಕಂಡು, ಜನಮೆಚ್ಚುಗೆಗೂ ಪಾತ್ರವಾಗಿದ್ದು ಈಗ ಇತಿಹಾಸ.

'ಕಾರೆ ಕಾರೆ ಜ್ವಾಕೊ', 'ಗೋಲ್ಡನ್ ಡೋವ್'ನಂತಹ ಚಿತ್ರಗಳನ್ನೂ ಕೊಟ್ಟ ಈ ಚಿತ್ರ ನಿರ್ಮಾಪಕಿ, ಸದ್ಯ ಜಿಂಬಾಬ್ವೆಗೆ ಪ್ರಜಾತಾಂತ್ರಿಕ ಸ್ವರೂಪವನ್ನು ನೀಡುವಲ್ಲಿ ನಿರತವಾದ ಹೋರಾಟಗಾರ್ತಿ. ಸ್ವಾತಂತ್ರ್ಯಕ್ಕಾಗಿ ಧ್ವನಿ ಎತ್ತುತ್ತಾ, ಜನರೊಂದಿಗೆ ಬೀದಿಗೆ ಇಳಿಯುತ್ತಿರುವ ಈ ನಾಯಕಿ, ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಗಿ ಜೈಲಿಗೂ ಹೋಗಿ ಬಂದವರು. ಸಾಹಿತ್ಯದಲ್ಲಿ ಮಾತ್ರ ಆದರ್ಶದ ಮಾತುಗಳನ್ನು ಬರೆಯುತ್ತಾ ಕೂರದೆ, ಸಮುದಾಯದ ಕಷ್ಟಸುಖದಲ್ಲಿ ಭಾಗಿಯಾದವರು. ಆದ್ದರಿಂದಲೇ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಸಾಲಿನಲ್ಲಿ ಅವರು ವಿಶೇಷವಾಗಿ ಎದ್ದು ಕಾಣುವುದು. ■